**SPL.C. 5136/2024**

ಚಾ.ಸಾ **:11** ಪ್ರಾ.ಸಾ **:11**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಈರಣ್ಣ |
| ತಂದೆ ಹೆಸರು | : | ಬಾಪುರಾಯ್ ಕರೋಶಿ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಅಕೌಂಟೆಂಟ್ |
| ವಿಳಾಸ | : | ಮಾಡ ಸಿರವಾರ |

ಸಾಕ್ಷಿಗೆ ದಿನಾಂಕ **25-02-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**

2017 ರಿಂದ ನಾನು ಮಾಡ ಸಿರವಾರ ಗ್ರಾಮದ ಪಂಚಾಯಿತಿಯಲ್ಲಿ ಪಿ.ಡಿ.ಓ. ಮತ್ತು ಅಕೌಂಟೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 06-12-2022 ರಂದು ನಾನು ನಿ.ಪಿ.2 ರಲ್ಲಿಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ಉದ್ಬಾಳ್ ಗ್ರಾಮದಲ್ಲಿ ಗ್ರಾಮ ಠಾಣಾ ಜಾಗೆಯಲ್ಲಿ ಸಹಿ ಮಾಡಿದ್ದೇನೆ. ನಿ.ಪಿ.3 ರಲ್ಲಿ ನನ್ನ ಭಾವ ಚಿತ್ರಗಳು ಇವೆ. ಅಲ್ಲಿ ಪೊಲೀಸರು ಜಗಳ ಆಗಿದೆ ಎಂದು ಪಂಚನಾಮೆ ಮಾಡಿದ್ದಾರೆ. ಪಂಚನಾಮೆಯ ಸ್ಥಳದಲ್ಲಿ ಮುದ್ದೆಮಾಲು 1 ರಿಂದ 4 ಇದ್ದವು. ಅವುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ವಕೀಲರಿಂದ**:**

3. ಪೊಲೀಸರು ನನಗೆ ಪಂಚನಾಮೆಗೆ ಬರುವಂತೆ ನೋಟಿಸ್ ಕೊಟ್ಟಿದ್ದರು. ನೋಟಿಸನ್ನು ಕೊಟ್ಟ ದಿನಾಂಕ ಮತ್ತು ಸಮಯ ಗೊತ್ತಿರುವುದಿಲ್ಲ. ನೋಟಿಸನ್ನು ಪಂಚನಾಮೆ ಮಾಡಿದ ದಿನವೇ ಕೊಟ್ಟಿದ್ದರು. ಪೊಲೀಸರು ನನಗೆ ಪಂಚಾಯಿತಿಗೆ ಬಂದು ನೋಟಿಸ್ ಕೊಟ್ಟಿದ್ದಾರೆ. ನಾನು ಪಂಚನಾಮೆ ಮಾಡಿದ ದಿನದಂದು ನನ್ನ ಕಛೇರಿಗೆ ಬೆಳಿಗ್ಗೆ 08-30 ಗಂಟೆಗೆ ಹೋಗಿದ್ದೆನು. ಆ ದಿನ ನಾನು ಹಾಜರಾತಿ ಹಾಕಿದ್ದೇನೆ. ಅದರ ಪ್ರತಿಯನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನನಗೆ ಪೊಲೀಸರು ನೋಟಿಸ್ ಕೊಟ್ಟಿರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಲ್ಲಿಯವರೆಗೆ ನ್ಯಾಯಾಲದಿಂದ ಸಮನ್ಸ್ ಬಂದ ವಿಷಯವನ್ನು ಹೇಳಿದ್ದೇನೆ ಮತ್ತು ಪೊಲೀಸರು ಪಂಚನಾಮೆಗೆ ಬರುವಂತೆ ನೋಟಿಸ್ ಕೊಟ್ಟಿಲ್ಲ ಎಂದು ಉತ್ತರಿಸಿದ್ದಾರೆ.

**SPL.C. 5136/2024**
ಚಾ.ಸಾ **:11** ಪ್ರಾ.ಸಾ **:11**

4. ಪಂಚನಾಮೆಗೆ ಹೋಗುವ ಉದ್ದೇಶದಿಂದ ನಾನು ಕಛೇರಿ ಬಿಟ್ಟಾಗ ಬೆಳಿಗ್ಗೆ 08-40 ಗಂಟೆ ಆಗಿತ್ತು. ನನ್ನ ಬೈಕಿನಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೆನು. ನನ್ನೊಂದಿಗೆ ಆ ಸ್ಥಳಕ್ಕೆ ಬೇರೆ ಯಾರೂ ಬಂದಿರಲಿಲ್ಲ. ನಾನು ಸ್ಥಳ ಮುಟ್ಟಿದಾಗ ಬೆಳಿಗ್ಗೆ 09-00 ಗಂಟೆ ಆಗಿತ್ತು. ಮಾಡ ಸಿರವಾರದಿಂದ ಉದ್ಬಾಳ ಗ್ರಾಮ 2 ಕಿ.ಮೀ. ಅಂತರದಲ್ಲಿದೆ.

5. ನನಗೆ ಜಗಳವಾದ ಸ್ಥಳವನ್ನು ರಾಜಾ ಎಂಬಾತ ತೋರಿಸಿದ್ದಾನೆ. ಆತ ನಮ್ಮ ಪಂಚಾಯಿತಿಯ ಅಧ್ಯಕ್ಷನಿದ್ದನು ಅಂದರೆ ಸರಿ. ಆತನ ಮಾತನ್ನು ಕೇಳಿ ನಾನು ಘಟನಾ ಸ್ಥಳಕ್ಕೆ ಹೋಗದೆ ಇದ್ದರು ಸಹ ಹೋಗಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮುದ್ದೆಮಾಲು 1 ರಿಂದ 4 ಇವುಗಳನ್ನು ಬಿಟ್ಟು ಕಲ್ಲು ಮತ್ತು ಬಡಿಗೆಗಳು ಇರಲಿಲ್ಲ. ನಿ.ಪಿ.3 ರಲ್ಲಿ ಅನೇಕ ಕಲ್ಲುಗಳು ಕಾಣಿಸುತ್ತವೆ ಅಂದರೆ ಸರಿ.

6. ನಾನು ಪಂಚನಾಮೆಗೆ ಹೋಗಲು ನನ್ನಮೇಲಾಧಿಕಾರಿಗಳಿಂದ ಪರವಾನಿಗೆ ಪಡೆದಿಲ್ಲ. ನಾನು ಮುದ್ದೆಮಾಲು 1 ರಿಂದ 4 ಇವುಗಳ ಮೇಲೆ ಸಹಿಗಳನ್ನು ಮಾಡಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು